# ಜೋಳದ ರೊಟ್ಟಿಯೂ ಹಸಿ ಮೀನ್ ಪಳದಿಯೂ...

'ಫಸ್ಟಿಗೆ ನಾನೂ ಅವ್ರ ಮಾತ ಕೇಳಿದ್ದ ಖರೆ. ಪಾಟೀಲಗೌಡ ಮನೆತನದ ಹುಡುಗಿ ಕಾರವಾರದ ಯಾವ್ದೋ ಜಾತಿ ಪಾತಿ ಗೊತ್ತಿಲ್ಲದ, ಗರೀಬ ಹುಡುಗನ ಜೊತಿ ಪ್ರೀತಿ ಮಾಡೋದನ್ನ ವಿರೋಧ ಮಾಡಿದ್ದು ಹೌದುರಿ. ಆದ್ರ ಹೂವಿನಂಥ ಮಗಳು ಯಥಿ ಪಡೋದ ನೋಡಿ ನನ್ನ ಮನಸ್ಸು ಒಡೆದ ಹೋಗೈತ್ರಿ. ರಾಜಕುಮಾರಿ ಹಂಗ ಇದ್ದು ಸುಖ ಪಡಿಬೇಕಾದವಳು, ಈ ಪ್ರೀತಿ ಹಿಂದ್ ಬಿದ್ದು ಹಿಂಗ್ಯಾಕ ಕಷ್ಟ ಪಡಬೇಕು ಅನ್ನೋದ ಅರ್ಥ ಆಗವಲ್ರೀ. ಮಗಗ, ಅವನ ಮಾಂವಗ ಬೇಜಾನ್ ಬುದ್ಧಿ ಹೇಳಿದೆನ್ರೀ... ಕೇಳಾವಲ್ರು. ಈಗ ನಾ ಸಾಕಿದ ಗಿಳಿಗಳ ನನಗೆ ಹದ್ದಾಗಿ ಕಚ್ಚಾಕ ಹತ್ತಾವ್ರೀ' ಎಂದರು.

ಶೈಲತ್ತೆಗೆ ಅಣ್ಣನ ಮನಃಪರಿವರ್ತನೆಗೆ ಒಳಗೊಳಗೇ ಸಂತೋಷ ಆಗುತ್ತಿದ್ದರೂ, ಅವನು ಅಷ್ಟೊಂದು ಅಧೀರನಾಗಿರುವುದು ಚೂರು ಅನುಕಂಪ ಮೂಡಿಸಿ, 'ಬೇಜಾರ ಮಾಡ್ಕೋಬೇಡಾ ಅಣ್ಣ, ಎಲ್ಲಾ ಛಲೋನ ಆಕ್ಕೈತಿ' ಎಂದು ಸಮಾಧಾನ ಮಾಡಲು ನೋಡಿದಳು.

ನಾಗತಿಹಳ್ಳಿ ಸರ್ ಶೈಲತ್ತೆಯತ್ತ ನೋಡಿ, 'ಪ್ರೀತಿ ಪ್ರೇಮದಲ್ಲಿ ಪ್ರತಿಷ್ಠೆ–ಅಂತಸ್ತು ಅಡ್ಡಿಯಾಗಬಾರದು. ಒಲವು ಅನ್ನೋದು ತರುಣ ಮತ್ತು ತರುಣಿಯರ ನಡುವಿನ ಸಹಜ ಸಂಗತಿ ಆಗಬೇಕು. ನಮ್ಮಲ್ಲಿ ಅದು ಒಂದು ದೊಡ್ಡ ರಾಮಾಯಣ–ಮಹಾಭಾರತ, ಅಲ್ವ?' ಎಂದರು. 'ನೀವು ಗಮನಿಸಿದಿರಾ? ಆ ಹುಡುಗ ಹುಡುಗಿ ಜೊತೆ ಜೊತೆಗೆ ಗಾರ್ಡನ್ ಕಡೆ ಹೆಜ್ಜೆಯಿಡುವಾಗ ಎಷ್ಟು ಚಂದ ಅನಿಸುತ್ತಿತ್ತು. ಇಬ್ಬರದೂ ಒಳ್ಳೆ ಜೋಡಿ, ಕಾರವಾರದ ಕಿಂಗ್ ಫಿಶರ್, ಗುಲ್ಬರ್ಗಾದ ಗುಲ್‌ಮೊಹರ್ ಜೊತೆಯಾದ ಹಾಗೆ' ಎಂದರು. ಅವರು ಆ ಸಾಲನ್ನು ಹೇಳಿ ಮುಗಿಸಿದರೋ ಇಲ್ಲವೋ, ಗಾರ್ಡನ್ ಕಡೆಯಿಂದ ಕಿಟಾರನೆ ಕಿರುಚಿದ್ದು ಕೇಳಿತು. ಲಿಂಗಣ್ಣನವರು ಒಂದೇ ಏಟಿಗೆ ಅಲ್ಲಿಂದೆದ್ದು ಅತ್ತ ದೌಡಾಯಿಸಿದರು!

***

'ಹೇ ಪ್ರೀತ್, ನಾಗತಿಹಳ್ಳಿ ಸರ್ ನಿನ್ನ ಸಿನಿಮಾಕ್ಕೆ ತಗೋತಾರಂತಲ್ಲೋ... ಸ್ಟಾರ್ ಆಗ್ಬಿಟ್ಟೆಯಲ್ಲೋ ಕಡಲು ತೀರದ ಹುಡುಗಾ. ಈಗ ನಿನ್ನನ್ನ ಸ್ಟಾರ್ ಫಿಶ್ ಅಂತ ಕರೀಬಹುದು ತಗೋ' ಎಂದು ನಕ್ಕಳು.

'ಏನ್ ಸ್ಟಾರೋ ಏನ್ ಫಿಶ್ಶೋ, ಇಲ್ಲಿ ಮಿನುಗುವ ಬೆಳಕು ಮತ್ತು ಮಿಡಿಯುವ ಜೀವ ಮಾತ್ರ ನೀನೇ!' ಎಂದ, ತನ್ನ ಹೃದಯದತ್ತ ಬೆರಳಿಡುತ್ತಾ.

'ಆಹಾಹಾ, ದೊಡ್ಡ ಕವಿ ಮಹಾಶಯ ಆಗ್ಬಿಟ್ಟ ಇವನು! ಅಂದಹಾಗೆ ಪ್ರೀತ್, ನಿಂಗೆ ಆಕ್ಟಿಂಗ್ ಗೊತ್ತಿಲ್ಲವಲ್ಲೋ. ಆಕ್ಟಿಂಗ್ ಹೋಗ್ಲಿ, ನಿಂಗೆ ಹೃದಯದಲ್ಲಿರೋ ರಿಯಲ್ ಲವ್ ನೈತ ಸರಿಯಾಗಿ ವ್ಯಕ್ತ ಮಾಡೊಕೆ ಬರೋಲ್ಲವಲ್ಲೋ ಕೋತಿ' ಎಂದು ದೊಡ್ಡದಾಗಿ ನಕ್ಕಳು. ಪ್ರೀತಂ ಅವಳನ್ನೇ ನೋಡುತ್ತಿದ್ದ. ಅವಳ ಜೀವ ಸೊರಗಿದೆ. ಆ ಸೊರಗಿದ ಜೀವದೊಳಗೆ ಪ್ರೀತಿನದಿ ಹರಿಯುವುದು ಇನ್ನಷ್ಟು ಸ್ಫುಟವಾಗಿ ಕಾಣಿಸಿತು ಅವನಿಗೆ.

'ಎಂತಾ ಆಕ್ಟಿಂಗೆ ಮಾರಾಯ್ತಿ? ಒಮ್ಮೆ ಕನ್ನಡ ಶಾಲೀಲಿ ಆಯಿ ಟೀಚರ್ ಕೈಕಾಲಿಗ್ ಬಿದ್ದು ಹನುಮಂತನ ಪಾರ್ಟು ಹಾಕಿಸಿದ್ದಳು. ಇನ್ನೊಂದ್ಸಲ ಬೇಸಿಗೆ ರಜೇಲಿ ಬೆಟ್ಕುಳಿ ಮಾವ ಯಕ್ಷಗಾನದಲ್ಲಿ ಬಾಲಗೋಪಾಲನ ಪಾತ್ರ ಮಾಡಿಸಿದ್ದ' ಎಂದ.

'ಅಷ್ಟೇ ಸ್ವಾಮಿ' ಎಂದು ಸುದೀಪನ ಧ್ವನಿ ತೆಗೆದು ಡೈಲಾಗ್ ಹೊಡೆದ.

'ಸಾಕ್ ಸಾಕು. ಸ್ಟಾರ್ ಆಗೋ ಮುಂಚೆ ಇಷ್ಟೊಂದು ಅಟಿಟ್ಯೂಡ್ ಬೇಡಾ... ಹೇ ಪ್ರೀತ್! ನನ್ನ ಸಮುದ್ರ ಹೆಂಗಿದೆಯೋ? ಅಲೆಗಳು ನನ್ನ ನೆನಪಿಸುತ್ತವೇನೋ? ಬೀಚ್ ಮೇಲಿನ ಪುಟ್ಟ ಪುಟ್ಟ ಏಡಿಗಳು ಈಗ ಯಾರ ಕಾಲುಗಳಿಗೆ ಕಚಗುಳಿ ಇಡುತ್ತವೆಯೋ? ಐ ಮಿಸ್ ಕಡಲತೀರ! ಐ ಮಿಸ್ ಕಾರವಾರ!' ಅಂದಳು.

ಪ್ರೀತಂ ಮುನಿಸಿಕೊಂಡು, 'ಲೈಕ್ ಇಂವ ನೀನ ಮುಗುವೆ! ಕಾರವಾರದ ಕಡಲು, ತೆರೆಗಳು, ಏಡಿಗಳು, ಹುಳಹುಪ್ಪಡಿಗಳ ಬಗ್ಗೆ ಅದೆಂಥ ಮೋಹ ಮಾರಾಯ್ತಿ ನಿಂಗೆ! ಜೀವದ ಹಂಗು ತೊರೆದು ನಿಮ್ಮೂರಿನ ತಂಕ ಬಂದವನನ್ನು ಹೆಂಗಿಂವೆ ಅಂತ ಒಂದ್ ಮಾತು ಕೇಳಲಿಲ್ಲವಲ್ಲ. ನಂಗೆ ಸಣ್ಣ ಡೌಟು, ನೀನು ಪ್ರೀತ್ಸೋದು ಈ ಪ್ರೀತಂನನ್ನೋ ಅಥವಾ ಕಾರವಾರದ ಆ ಕಡಲನ್ನೋ ಅಂತ' ಎಂದ. 'ಕಡಲಿನ ಮೇಲೆ ಪ್ರೀತಿ, ನಿನ್ನ ಮೇಲೆ ಆ ಪ್ರೀತಿಯ ಅಭಿವ್ಯಕ್ತಿ' ಅಂದಳು ನಗುತ್ತಾ. ಪ್ರೀತಂ ಮುನಿಸಿಕೊಂಡೇ ಇದ್ದ.

'ಯವ್ವಿ ಯವ್ವಿ ನನ್ ಸ್ಟಾರ್ ಫಿಶ್ಶಿಗೆ ಭಯಂಕರ ಕೋಪಾನೇ ಬಂತಲ್ಲವ್ವಿ!' ಎಂದು ಎರಡೂ ಕೆನ್ನೆ ಹಿಂಡಿದಳು. ಅವನ ತೋಳಿಗೆ ಆನಿಸಿಕೊಂಡು 'ಹೇಯ್, ಕೋತಿ. ನಿನ್ನ ಕಾಣದೇ ನಿನ್ಜೊತೆ ಮಾತಾಡದೇ ಅದೆಷ್ಟು ಕೊರಗಿದೆ ನಿಂಗೊತ್ತಾ? ತುಂಬಾ ಕಷ್ಟ ಆಯ್ತು ಕಣೋ. ಪ್ರೀತಂನನ್ನು ಮರೆತುಬಿಡು ಅಂದರು. ಸಾಧ್ಯವಿಲ್ಲ ಅಂದೆ. ಮೊಬೈಲು ಕೊಡಲಿಲ್ಲ. ಹೊರಗೆ ಬಿಡಲಿಲ್ಲ. ಯಾರೊಡನೆಯೂ ಮಾತಾಡಲು ಬಿಡಲಿಲ್ಲ. ಅಪರಿಚಿತ ಕೋಣೆಯಲ್ಲಿ ಕೂಡಹಾಕಿದ್ರು. ಜಗತ್ತಿನ ಸಂಪರ್ಕವೇ ಇಲ್ಲದಂತೆ ಮಾಡಿದ್ರು. ಅತ್ತೆ, ಪ್ರತಿಭಟಿಸಿದೆ, ನನ್ನ ಪ್ರೇಮವನ್ನು ಅವರ ಎದೆಗೆ ಸೋಂಕಿಸುವ ಎಲ್ಲಾ ಪ್ರಯತ್ನಗಳನ್ನೂ ಮಾಡಿದೆ. ಅವರ ಎದೆ ಕರಗಲಿಲ್ಲ. ಆಮೇಲೆ ಮೌನವಾಗಿಬಿಟ್ಟೆ. ನಿನ್ನ ನೆನಪು ನನ್ನನ್ನು ಕಾಪಾಡಿತು. ಕೋಣೆ ತುಂಬಾ ಪ್ರೀತ್ ಪ್ರೀತ್ ಎಂದು ಗೀಚಿದೆ. ಜಗತ್ತಿನ ಯಾವ ಶಕ್ತಿಗೂ ನಮ್ಮನ್ನು ಅಗಲಿಸಲು ಸಾಧ್ಯವಿಲ್ಲ ಎಂಬ ವಿಶ್ವಾಸವಿತ್ತು. ಆ ಭರವಸೆಯೇ ನನ್ನನ್ನು ಕೈಹಿಡಿಯಿತು.'

'ನನ್ನನ್ನು ಗೃಹಬಂಧನದಲ್ಲಿಟ್ಟದ್ದು ಯಾರಿಗೂ ಗೊತ್ತಿರಲಿಲ್ಲ. ಜೇವರ್ಗಿ ಮನೆಗೆ ನೀವು ಹೋಗಿ ಬಂದಮೇಲೆ ವಿಷಯ ಹೊರಬಿತ್ತು. ಅಜ್ಜಿ ಚಂಡಿಯಾದಳಂತೆ. ಅಪ್ಪನನ್ನು ತರಾಟೆಗೆ ತಗೊಂಡಳಂತೆ. ನನ್ನ ಮೊಮ್ಮಗಳನ್ನು ಈಗಿಂದೀಗಲೇ ಕಾಣಿಸದಿದ್ರೆ ಕುಸ್ಗಿ ಕಡಿತೀನಿ ಇಲ್ಲಾ ನಂದೇ ಕುಯ್ಕೊಂಡ್ಕೊಳ್ತೀನಿ ಅಂತ ಕುಡಗೋಲು ತಗೊಂಡಳಂತೆ. ಅಪ್ಪನಿಗೆ ನನ್ನನ್ನು ಕರೆತರದೇ ಬೇರೆ ದಾರಿಯೇ ಇರಲಿಲ್ಲ' ಎಂದಳು.

'ಈ ವಿರಹದ ನೋವಿನಲ್ಲೂ ಪ್ರೇಮದ ಸುಗಂಧ ನಮ್ಮನ್ನು ಒಂಥರಾ ನಶೆಯಲ್ಲಿಡುತ್ತದೆ ಅಲ್ವೇನೋ ಹುಡುಗಾ?' ಎಂದಳು.

'ಅಯ್ಯೋ, ಅಪರೂಪಕ್ಕೆ ಪ್ರೇಮಿಗಳಿಬ್ಬರು ಅಕ್ಕಪಕ್ಕ ಕೂತು, ಪ್ರೇಮದ ಪ್ರವಚನ ಕೇಳ್ತಾರೋ ಅಥವಾ ಅಪ್ಪಿಕೊಳ್ಳುವಂಥ, ಪಪ್ಪಿ ಕೊಡುವಂಥ ಚಿಕ್ಕಪುಟ್ಟ ಪಾಪಕೃತ್ಯಗಳನ್ನು ಎಸಗುತ್ತಾರೋ' ಎಂದು ನಾಟಕೀಯವಾಗಿ ಅವಳೆದುರು ನಿಂತ. 'ನಂಗೊತ್ತು, ಈ ಕ್ಷಣವನ್ನು ಮುದಗೊಳಿಸುವ ಒಂದು ಮಾತು, ನವಿರಾದ ಒಂದು ನೋಟ, ಹಿತವಾದ ಒಂದು ಅಪ್ಪುಗೆ ಇವೆಲ್ಲ ಪ್ರೇಮವನ್ನು ಪೊರೆಯಲು ಬೇಕಾಗುತ್ತವೆ' ಎಂದಳು ಸುಮಿ ಅವನಿಗೆ ಒತ್ತಿಕೊಳ್ಳುತ್ತಾ. 'ಅದಕ್ಕೇ ಹೇಳಿದ್ದು, ಗುಲ್ಬರ್ಗಾದಲ್ಲಿ ಗಮ್ಮತ್ತೇನಾದರೂ ಉಂಟಾ ಅಂತ' ಎಂದು ಅವಳ ತುಟಿ ಮೇಲೆ ಬೆರಳಾಡಿಸಿದ. 'ಥೂ, ಹೋಗೋ. ನಿಂಗೆ ಅದೊಂದೇ ಆಸೆ. ಹೇ ಪ್ರೀತ್...

